ದಿನಾಂಕಃ 08.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಮ್ಮ ತಂದೆಯ ಹೆಸರು ತಿಪ್ಪೇಸ್ವಾ ಮಿ ತಾಯಿ ಹೆಸರು ನಾಗರತ್ನಮ್ಮ ಎಂದರೆ ಸರಿ. ನಮ್ಮ ತಂದೆ ತಾಯಿಯರಿಗೆ ನಾವು ಮೂರು ಜನ ಮಕ್ಕಳು ಅವರುಗಳ ಹೆಸರು ಅಜಯ್ , ನವೀನ್ ಮತ್ತು ಗಜೇಂದ್ರ. ನಮ್ಮ  ತಾತನ ಹೆಸರು ಹನುಮಂತರಾಯಪ್ಪ ಎಂದರೆ ಸರಿ . ನಮ್ಮ ತಾತನಿಗೆ ತಿಪ್ಪೇ ಸ್ವಾ ಮಿ ಮತ್ತು ಬಸವರಾಜು ಎಂಬ ಇಬ್ಬರು ಮಕ್ಕಳು ಎಂದರೆ ಸರಿ.  ನಮ್ಮ ತಾತನಿಗೆ 4 ಜನ ಸಹೋದರರು ಎಂದರೆ ಸರಿ. ಅವರೆಂದರೆ ಹನುಮಂತರಾ ಯಪ್ಪ, ಚನ್ನಪ್ಪ, ಬಸವಲಿಂಗಯ್ಯ ಮತ್ತು ಭೀಮಣ್ಣ. ಭೀಮಣ್ಣ ಎಂಬುವವರು 1ನೇ ಪ್ರತಿವಾದಿಯ ಗಂಡ ಎಂದರೆ ಸರಿ . ನಾನು 7ನೇ ತರಗತಿಯವರೆಗೆ ಬಡಮಾರನಹಳ್ಳಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕ ಗೊತ್ತಿಲ್ಲ. ನನ್ನ ಶಾಲಾ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನ್ನ ತಕರಾರು ಇಲ್ಲ ಎಂದರೆ ಸರಿ. ನನಗೆ ವಿವಾಹವಾಗಿರುತ್ತದೆ. ನನ್ನ ಹೆಸರಲ್ಲಿ ಪಡಿತರ ಚೀಟಿ ಇರುವುದಿಲ್ಲ. ಅಧಾರ್ ಮತ್ತು ಚುನಾವಣಾ ಗುರುತಿನ ಚೀಟಿ ಇರುತ್ತದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆ ತಾಯಿ ಜೀವಂತ ಇದ್ದು, ಅವರಿಗೆ ಪಡಿತರ ಚೀಟಿ ಇರುತ್ತದೆ. ನಾನು ಮತ್ತು ನಮ್ಮ ತಂದೆ ತಾಯಿ ಬೇರೆ ಬೇರೆ ಮನೆಯಲ್ಲಿ ವಾಸವಿರುತ್ತೇವೆ. ನಮ್ಮ ತಂದೆ ತಾಯಿಯವರ ಪಡಿತರಚಿಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನ್ನ ತಕರಾರು ಇರುವುದಿಲ್ಲ. 2ನೇ ಪ್ರತಿವಾದಿಯೂ 1ನೇ ಪ್ರತಿವಾದಿಯ ಮಗಳು ಎಂದರೆ ಸರಿ. ನನ್ನ ವಯಸ್ಸು 34 .2ನೇ ಪ್ರತಿವಾದಿಗೆ ಇಬ್ಬರು ಮಕ್ಕಳು. 1ನೇ ಪ್ರತಿವಾದಿ ಮತ್ತು ಅವರ ಗಂಡ ಜೀವಂತ ಇದ್ದಾಗ, 2ನೇ ಪ್ರತಿವಾದಿ ಅವರೊಂದಿಗೆ ವಾಸ ಇದ್ದರು ಎಂದರೆ ಸರಿ . ದಾವಾ ಸ್ವತ್ತು ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸರಿ. 1ನೇ ಪ್ರತಿವಾದಿಯ ಗಂಡ 2013 ರಲ್ಲಿ ಮೃತ ಪಟ್ಟಿರುತ್ತಾರೆ. ಆ ಸಮಯದಲಿ ಅವರ ವಯಸ್ಸು 75 ಅಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ. ಭೀಮಣ್ಣ ಮರಣ ನಂತರ ಅವರ ಅಸ್ತಿಯು 1ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಅಗಿದೆ ಎಂದರೆ ಸರಿ. 1ಮತ್ತು 2 ನೇ ಪ್ರತಿವಾದಿ ಅವರ ಸ್ವತ್ತನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದರು ಎಂದರೆ ಸರಿ.    ನಮ್ಮ ತಾತ ಹನುಮಂತರಾಯಪ್ಪ

ರವರು 1 ಎಕರೆ ಜಮೀನು ಇರುತ್ತದೆ. ಸದರಿ ಆಸ್ತಿಯನ್ನು ನಮ್ಮ ತಂದೆಯವರು ಸ್ವಾಧೀನಾನುಭವದಲ್ಲಿರುತ್ತಾರೆ . 2ನೇ ಪ್ರತಿವಾದಿ ಅವಿದ್ಯವಂತರು ಎಂದರೆ ಸರಿ. ಪ್ರತಿವಾದಿಗಳ ಆಸ್ತಿಯನ್ನು ಹೊಡೆಯಲು ನಾವು ಕೆಲವು ದಾಖಲೆಗಳನ್ನು ಸೃಷಿ. ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ 1 ಅನ್ನು ಕಾನೂನು ಬಾಹಿರ ವಾಗಿ ಸೃಷ.ಿ ಮಾಡಿಕೊಂಡೇವು ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಪ್ರತಿವಾದಿಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಮ್ಮ ತಾತ ಭೀಮಣ್ಣ ಅವಿದ್ಯಾವಂತರಾಗಿದ್ದರು ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಹೆಸರಿಗೆ ದಾವಾ ಸ್ವತ್ತಿನ ದಾಖಲೆಗಳು ವರ್ಗಾವಣೆ ಅಗಿ ಅವರೆ ಸ್ವಾ ಧೀನದಲ್ಲಿದ್ದರು ಎಂದರೆ ಸರಿ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.